## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 01-09-2022

### ಮಾರ್ಕೆಟ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 64/2022 ಕಲಂ 379 ಐಪಿಸಿ :-

ದಿನಾಂಕ 31-08-2022 ರಂದು 1130 ಗಂಟೆಗೆ ಫಿರ್ಯಾದಿ ಶ್ರೀ ಶಿವಶರಣಪ್ಪಾ ಪಾಟೀಲ ತಂದೆ ಮಲಶೆಟ್ಟಿ ಪಾಟೀಲ ವಯ 45 ವರ್ಷ ಜಾತಿ ಲಿಂಗಾಯತ ಉ;ಮಡಿವಾಳೇಶ್ವರ ಪ್ರೌಢ ಶಾಲೆಯಲ್ಲಿ ಮುಖ್ಯಗುರುಗಳು ಸಾ:ನಾವದಗೇರಿ ಬೀದರ ಇವರು ಠಾಣೆಗೆ ಹಾಜರಾಗಿ ಮೌಖಿಕ ಹೇಳಿಕೆ ನೀಡಿದರ ಸಾರಾಂಶವೆನಂದರೆ, ಇವರ ತಮ್ಮ ದಿಲೀಪ ಪಾಟೀಲ ತಂದೆ ಮಲಶೆಟ್ಟಿ ಪಾಟೀಲ ವಯ 39 ವರ್ಷ ಜಾತಿ ಲಿಂಗಾಯತ ಉ; ಗುತ್ತೆದಾರ ಕೆಲಸ ಸಾ:ಟಿಚರ್ಸ್ ಕಾಲೋನಿ ಭಾಲ್ಕಿ ಇವರ ಹತ್ತಿರ ಒಂದು ಸ್ಪಲೆಂಡರ್ ಪ್ಲಸ್ ದ್ವಿಚಕ್ರವಾಹನ ನಂ.ಕೆ.ಎ.39-ಹೆಚ್-1274 ನೇದ್ದು ಇರುತ್ತದೆ ಇದು ಕಪ್ಪು ಬಣ್ಣದು ಇದ್ದು ಇದರ ಚೆಸ್ಸಿ.ನಂ 04ಜಿ16ಎಫ್19586 & ಇಂಜಿನ್.ನಂ. 04ಜಿ15ಎಫ್19886 ನೇದ್ದು ಇರುತ್ತದೆ. ಇದು 2004 ನೇ ಸಾಲಿನ ಮೊಡಲುದು ಇದ್ದು ಇದರ ಅ.ಕಿ.25000/-ರೂ ಇರುತ್ತದೆ. ಹೀಗಿರುವಾಗ ದಿನಾಂಕ 27-08-2022 ರಂದು ರಾತ್ರಿ 2200 ಗಂಟೆಯ ಸುಮಾರಿಗೆ ಈ ಮೇಲೆ ನಮೂದಿಸಿದ ದ್ವಿಚಕ್ರವಾಹನವನ್ನು ನಾನು ಬೀದರ ನಗರದ ನಾವದಗೇರಿಯಲ್ಲಿರುವ ಮನೆಯ ಮುಂದೆ ನಿಲ್ಲಿಸಿದ್ದು ನಂತರ ದಿನಾಂಕ 28-08-2022 ರಂದು 0700 ಗಂಟೆಯ ಸುಮಾರಿಗೆ ಮನೆಯಿಂದ ಹೊರಗೆ ಬಂದು ನೋಡಲಾಗಿ, ದ್ವಿಚಕ್ರವಾಹನ ಇರಲಿಲ್ಲಾ. ದಿನಾಂಕ 27-08-2022 ರಂದು ರಾತ್ರಿ 2200 ಗಂಟೆಯಿಂದ ದಿನಾಂಕ 28-08-2022 ರಂದು 0700 ಗಂಟೆಯ ಅವಧಿಯಲ್ಲಿ ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಸಂತಪೂರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 90/2022 ಕಲಂ. 3 & 7 ಎಸೆನ್ಸಿಯಲ್ ಕಮಾಡಿಟಿಸ್ ಕಾಯ್ದೆ 1955 :- :-

ದಿನಾಂಕ 31/08/2022 ರಂದು 1630 ಗಂಟೆಗೆ ಶ್ರೀಮತಿ ಫಿರ್ಯಾದಿ ಪ್ರೇಮಲತಾ ಆಹಾರ ನಿರೀಕ್ಷಕರು ಔರಾದ ( ಬಿ) ರವರು ಠಾಣೆಗೆ ಹಾಜರಾಗಿ ಒಂದು ಲಿಖೀತ ದೂರು ಹಾಜರ ಪಡಿಸಿದ್ದು ಅದರ ಸಾರಾಂಶವೇನೆಂದರೆ ದಿನಾಂಕ 31/08/2022 ರಂದು 1000 ಗಂಟೆಗೆ ವಡಗಾಂವ ಗ್ರಾಮದ ವಡಗಾಂವ (ಡಿ)-ಚಿಂತಾಕಿ ರೋಡಿನ ಹತ್ತಿರ ಬಿ.ಎಸ್. ಎನ್ ಎಲ್ ಟವರ ಎದುರುಗಡೆ ಝರೆಪ್ಪಾ ಮಮದಾಪೂರೆ ರವರ ಕಟ್ಟಡದಲ್ಲಿ ಪಡಿತರ ಚಿಟಿದಾರರಿಗೆ ಸರಬರಾಜು ಮಾಡುವ ಆಹಾರ ಧಾನ್ಯ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿಟ್ಟಿರುತ್ತಾರೆ ಅಂತ ಖಚಿತ ಮಾಹಿತಿ ಇದ್ದ ಮೇರೆಗೆ ಸಿಬ್ಬಂದಿಯೊಂದಿಗೆ ವಡಗಾಂವ ಗ್ರಾಮದ ಚಿಂತಾಕಿ ರೋಡಿನ ಹತ್ತಿರ ಇರುವ ಝರೆಪ್ಪಾ ಮಮದಾಪೂರೆ ರವರ ಕಟ್ಟಡದ ಹತ್ತಿರ 1230 ಗಂಟೆಗೆ ಹೋಗಿ ನೋಡಿದಾಗ ಸದರಿ ಕಟ್ಟಡದ ಮುಂದೆ ಒಬ್ಬ ವ್ಯಕ್ತಿ ಇದ್ದು ಮತ್ತು ಒಂದು ಗೂಡ್ಸ ಮಹಿಂದ್ರಾ ಬುಲೆರೋ ಇದ್ದು ಅದರ ನಂಬರ ಕೆ ಎ 37 4424 ಇದ್ದು ಸದರಿ ವ್ಯಕ್ತಿಗೆ ಹಿಡಿದು ಅವನ ಹೆಸರು ವಿಳಾಸ ವಿಚಾರಿಸಲಾಗಿ ಸಂಗಮೆಶ ತಂದೆ ಬಂಡೆಪ್ಪಾ ಕಾಡೋದೆ ವ, 32 ವರ್ಷ ಜಾ/ ಲಿಂಗಾಯತ ಉ/ವ್ಯಾಪಾರ ಸಾ/ಸಂತಪೂರ ಸದ್ಯ ವಡಗಾಂವ ಅಂತ ತಿಳಿಸಿದ್ದು ಕಟ್ಟಡದಲ್ಲಿ ಪಡಿತರ ಚಿಟಿದಾರರಿಗೆ ಸರಬರಾಜು ಮಾಡುವ ಆಹಾರ ಧಾನ್ಯ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದು ಶೋಧನೆ ಮಾಡಿದಾಗ ಸಂಗಮೇಶ ಇತನ ಬಾಡಿಗೆಯಿಂದ ಉಳಿದ ಕಟ್ಟಡದಲ್ಲಿ ಸುಮಾರು ಬಿಳಿ ಹಳದಿ ಮತ್ತು ಗೋಣಿ ಚಿಲದಲ್ಲಿ ಚಿಲಗಳು ಇದ್ದು ಅವಗಳು ಪರಿಶಿಲಿಸಿ ನೋಡಿದಾಗ ಎಲ್ಲಾ ಚಿಲದಲ್ಲಿ ಪಡಿತರ ಚಿಟಿದಾರರಿಗೆ ಸರಬರಾಜು ಮಾಡುವ ಆಹಾರ ಅಕ್ಕಿಯನ್ನು ಇದ್ದು ಎಲ್ಲಿಂದ ತಂದು ಸಂಗ್ರಹಿಸಿದ್ದು ಅಂತ ಕೇಳಿದಾಗ ಈ ಅಕ್ಕಿಯನ್ನು ವಡಗಾಂವ (ಡಿ) ಸುತ್ತ ಮುತ್ತನ ಹಳ್ಳಿಗಳಿಂದ ಸಾರ್ವಜನಿಕರಿಂದ ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡಿ ಹಣ ಗಳಿಸುವ ಉದ್ದೇಶದಿಂದ ಖರಿದಿ ಮಾಡಿ ಬಾಡಿಗೆ ಪಡೆದ ಕಟ್ಟಡದಲ್ಲಿ ಸಂಗ್ರಹಣೆ ಮಾಡಿರುತ್ತನೆ ಮತ್ತು ನನ್ನ ಟೆಂಪೂದಲ್ಲಿ ಇಂದು ಸಹ ಸುತ್ತ ಮುತ್ತ ಹಳ್ಳಿಗಳಿಗೆ ಹೋಗಿ ಪಡಿತರ ಆಹಾರ ಧಾನ್ಯ ಅಕ್ಕಿಯನು ಖರಿದಿ ಮಾಡಿಕೊಂಡು ಚಿಲದಲ್ಲಿ ತುಂಬಿಕೊಂಡು ಟೆಂಪೂದಲ್ಲಿ ಹಾಕಿಕೊಂಡು ಬಂದ ಕಟ್ಟಡದಲ್ಲಿ ಜಮಾ ಮಾಡಲು ತಂದು ನಿಲ್ಲಿಸಿರುತ್ತನೆ ಅಂತ ತಿಳಿಸಿರುತ್ತಾನೆ . ಸಂಗ್ರಹಣೆ ಮಾಡಿದ ಕಟ್ಟಡದಲ್ಲಿನ ಅಕ್ಕಿಯ ಚಿಲಗಳು ಪಂಚರ ಸಮಕ್ಷಮ

ಪರಿಶಿಲಿಸಿ ನೋಡಿ ಆಹಾರ ನಿರೀಕ್ಷಕರು ಔರಾದ (ಬಿ) ರವರು ಸದರಿ ಅಕ್ಕಿಯನ್ನು ಪರಿಶಿಲಿಸಿ ಇವು ಸರಕಾರದಿಂದ ವಿವಿಧ ಯೊಜನೆ ಅಡಿಯಲ್ಲಿ ಸರಬರಾಜು ಆಗುವ ಅಕ್ಕಿಗೆ ಹೋಲುವ ಅಕ್ಕಿ ಹಾಗೆ ಇರುತ್ತವೆ ಅಂತ ಕೇಳಿ ಅವರ ಹತ್ತಿರ ಈ ಅಕ್ಕಿಯ ಬಗ್ಗೆ ದಾಖಲಾತಿಗಳನ್ನು ಕೇಳಿದಾಗ ಅವರು ಯಾವುದೆ ದಾಖಲಾತಿಗಳು ಇಲ್ಲ ಅಂತ ತಿಳಿಸಿದ್ದು ನಂತರ ಸಾಹಾಯಕಾಗಿ ಹಮಾಲರನು ಕರೆಯಿಸಿ ಸದರಿ ಕಟ್ಟಡದಲ್ಲಿ್ಲ ಇದ್ದ ಪಡಿತರ ಅಕ್ಕಿಯನು ತೂಕ ಮಾಡುವವರಾದ ಸಂಗಮೇಶ ಕೌಡಗೆ ರವರಿಂದ ತೂಕ ಮಾಡಿಸಲು 202 ಬಿಳಿ ಹಳದಿ ಪ್ಲಾಸ್ಟೀಕ ಚಿಲಗಳು ಮತ್ತು ಗೋಣಿ ಚಿಲಗಳಲ್ಲಿ ಇದ್ದು ಒಟ್ಟು 101 ಕ್ವಿಂಟಲ್ 50 ಕೆ ಜಿ ಇದ್ದು ಮತ್ತು ಟೆಂಪೂದಲ್ಲಿ ಇದ್ದ ಒಟ್ಟು 29 ಬಿಳಿ ಬಣ್ಣದ ಪ್ಲಾಸ್ಟಿಕ ಚೀಲಗಳು ಇದ್ದು ಒಟ್ಟು 12 ಕ್ವಿಂಟಲ್ 6 ಕೆ.ಜಿ ಇದ್ದು ಹೀಗೆ ಒಟ್ಟು 113 ಕ್ವೀಂಟಲ 56 ಕೆ ಜಿ ಅಕ್ಕಿ ಇದ್ದು ಈ ಅಕ್ಕಿಯು ಹೊರಗಿನ ಮಾಕರ್ೆಟ ದರ ಪ್ರತಿ ಕೆ.ಜಿ . ಸುಮಾರು 30 ರೂಪಾಯಿಯಂತೆ ಮಾರಾಟ ಮಾಡುತ್ತಾರೆ ಇದರ ಒಟ್ಟು ಅ:ಕಿ: 3.40.680/-ರೂಪಾಯಿ ಮತ್ತು ಗೂಡ್ಸ ಮಹಿಂದ್ರ ಬೂಲೋರೋ ಅದರ ಅ.ಕಿ 1.50.000-/ರೂ ಆಗ ಬಹುದು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.